ರಸ್ತೆ ಹದ ಗೆಟ್ಟಿರುವುದು

60 (622) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಈ ಕೆಳಗಿನ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:–

(ಅ) ಮೈಸೂರು ನಗರದ ಮೈಸೂರು–ಬೋಗಾದಿ ರಸ್ತೆಯು ಸರ್ಕಾರಿ ಮುದ್ರಣಾಲಯ ವೃತ್ತದಿಂದ ದೋಬಿ ಘಾಟ್‌ನಿಂದ ಮುಂದೆ ಬಹಳ ದೂರದವರೆಗೆ ಸಂಚಾರಕ್ಕೆ ಯೋಗ್ಯವಾಗಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಈ ರಸ್ತೆ ಅಭಿವೃದ್ಧಿಗೆ ಡಾಂಬರೀಕರಣಕ್ಕೆ ಎಷ್ಟು ವೆಚ್ಚವಾಗುವುದೆಂದು ತಿಳಿಸುವುದು?

(ಇ) ಈ ರಸ್ತೆ ಅಭಿವೃದ್ಧಿಗೆ ಈವರೆಗೆ ಯಾವ ಕ್ರಮ ವಹಿಸಲಾಗಿದೆ. ಈ ರಸ್ತೆ ಅಭಿವೃದ್ಧಿ ಆಗುವುದು ಯಾವಾಗ ತಿಳಿಸುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

(ಅ) ಮೈಸೂರು ನಗರದ ಮೈಸೂರು ಬೋಗಾದಿ ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, ಸರಪಳಿ 0.00 ಇಂದ 17.80 ಕಿ.ಮೀ. ವರೆಗೆ ಅಂದರೆ ಒಟ್ಟು 17.80 ಕಿ.ಮೀ. ಉದ್ದವಿರುತ್ತದೆ. ಸದರಿ ರಸ್ತೆಯು ಭಾಗಶಃ ಸಂಚಾರಕ್ಕೆ ಯೋಗ್ಯವಾಗಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

(ಆ) ಸದರಿ ರಸ್ತೆಯು ಸರಪಳಿ 0.00 ರಿಂದ 12.05 ಕಿ.ಮೀ.ವರೆಗೆ ಹಾಗೂ 16.55 ರಿಂದ 17.8 ಕಿ.ಮೀ.ವರೆಗೆ ಅಭಿವೃದ್ಧಿ ಗುಂಡಿ ಮುಚ್ಚುವುದು ಹಾಗೂ ಡಾಂಬರೀಕರಣಕ್ಕೆ 2011–12ನೇ ಸಾಲಿನಲ್ಲಿ ರೂ. 510.00 ಅನುದಾನ ಬಿಡುಗಡೆ ಮಾಡಿದ್ದು, ಬಾಕಿ ಉಳಿದಿರುವ ಸರಪಳಿ 12.05 ರಿಂದ 16.55 ಯನ್ನು ಅಭಿವೃದ್ಧಿಪಡಿಸಲು ರೂ. 220.00 ಲಕ್ಷಗಳ ಅನುದಾನದ ಅವಶ್ಯಕತೆ ಇರುತ್ತದೆ.

(ಇ) ಈ ರಸ್ತೆಯು ಅಭಿವೃದ್ಧಿಗಾಗಿ ಸರ್ಕಾರ ಈವರೆಗೆ ತೆಗೆದುಕೊಂಡಿರುವ ಕ್ರಮಗಳ ವಿವರ ಈ ಕೆಳಗಿನಂತಿದೆ:

ಸರಪಳಿ	ಲೆಕ್ಕಶೀರ್ಷಿಕೆ	ವರ್ಷ	ಅನುದಾನದ ಮೊತ್ತ ರೂ. ಲಕ್ಷಗಳಲ್ಲಿ	ಷರಾ
1	2	3	4	5
0.0 ರಿಂದ 0–8 ಕಿ.ಮೀ.	5054–ಓಆರ್‌ಎಫ್	2011–12	60.00	ಅಂದಾಜು ಪತ್ರಿಕೆ ತಯಾರಿಕೆ ಹಂತದಲ್ಲಿದೆ

0.8 ರಿಂದ 1.0 ಕಿ.ಮೀ.	3054– ಯೋಜನೇತರ	2011–12	10.00	ಅಭಿವೃದ್ಧಿ ಕಾಮಗಾರಿ ಪ್ರಗತಿ ಯಲ್ಲಿದೆ.
1.0 ರಿಂದ 1.5 ಕಿ.ಮೀ.	3054– ದಸರ	2011–12	90.00	ಕಾಮಗಾರಿ ಪ್ರಾರಂಭಿಸ ಬೇಕಿದೆ.
1.5 ರಿಂದ 1.8	5054– ಓ.ಆರ್.ಎಸ್.	2010–11	75.00	ಕಾಮಗಾರಿ ಪೂರ್ಣ ಗೊಂಡಿದೆ.
1.8 ರಿಂದ 2.5	3054– ಯೋಜನೇತರ	2011–12	15.00	ಕಾಮಗಾರಿ ಪ್ರಗತಿ ಯಲ್ಲಿದೆ.
2.5 ರಿಂದ 5.5 ಕಿ.ಮೀ.	ಸಿ.ಆರ್.ಎಫ್.	2009–10	120.00	ಕಾಮಗಾರಿ ರಾಷ್ಟ್ರೀಯ ಹೆದ್ದಾರಿ ಯವರಿಂದ ನಿರ್ವಹಿಸಿ ಪೂರ್ಣಗೊಳಿ ಸಲಾಗಿದೆ.
5.5 ರಿಂದ 5.6 ಕಿ.ಮೀ.	3054 ಯೊಜನೇತರ	2011–12	5.00	ಗುಂಡಿ ಮುಚ್ಚುವ ಕಾಮಗಾರಿ ಪೂರ್ಣ ಗೊಳಿಸ ಲಾಗಿದೆ.
5.6 ರಿಂದ 12.05 ಕಿ.ಮೀ.	5054– ಓ.ಆರ್.ಎಫ್.	2011–12	300.00	ಅಂದಾಜು ಪತ್ರಿಕೆ ತಯಾರಿಸ ಲಾಗಿದೆ ಮಂಜೂರಾತಿ ಹಂತದಲ್ಲಿದೆ.
16.55 ರಿಂದ 17.8	3054– ಯೋಜನೇತರ	2011–12	21.00	ಅಭಿವೃದ್ಧಿ ಕಾಮಗಾರಿ ಗಳು ಪ್ರಗತಿ ಯಲ್ಲಿದೆ.
		ಒಟ್ಟು ಮೊತ್ತ	705.00	

ಈ ರಸ್ತೆ ಅಭಿವೃದ್ಧಿಗಾಗಿ ಈ ಸಾಲಿನಲ್ಲಿ ಒಟ್ಟಾರೆಯಾಗಿ ಎಲ್ಲ ಲೆಕ್ಕಶೀರ್ಷಿಕೆಗಳು ಸೇರಿದಂತೆ ರೂ. 510.00 ಲಕ್ಷಗಳ ಅನುದಾನ ಬಿಡುಗಡೆ ಮಾಡಿದ್ದು ಈ ವರ್ಷದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ನೀಡಿದ್ದಾರೆ, ಮೈಸೂರು ಮಹಾರಾಜರು ಆಳಿದಂಥ ಊರು, ಆ ರಸ್ತೆಗಳು ಹೇಗೆ ಹದಗೆಟ್ಟು ಹೋಗಿವೆ ಎಂದರೆ, ಗರ್ಭಿಣಿ ಹೆಣ್ಣು ಮಕ್ಕಳು ಆ ರಸ್ತೆಯಲ್ಲಿ ಓಡಾಡಿದರೆ ಪ್ರಸವ ವೇದನೆ ಬಂದು ರಸ್ತೆಯಲ್ಲೇ ಮಗು ಹೆರಿಗೆಯಾಗುವ ಅಂಥ ಒಂದು ಸ್ಥಿತಿ ಅಲ್ಲಿದೆ. ಈಗ ಅದು ಗೊತ್ತಿದೆ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ, ಅದನ್ನು ಕಾಮಗಾರಿಗಳ ಕೆಲಸವನ್ನು ಕಾರ್ಯರೂಪಕ್ಕೆ ತರುವುದರ ಜೊತೆಗೆ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತಿದೆ. ಅಲ್ಲಿ ಸಾವಿರಾರು ಹೆಣ್ಣು ಮಕ್ಕಳು ಸೇರಿದಂತೆ ಜನರು ಓಡಾಡುತ್ತಾರೆ. ಸಾವಿರಾರು ಬಸ್, ವೆಹಿಕಲ್‌ಗಳು ಓಡಾಡುತ್ತವೆ, ಆ ರಸ್ತೆಗಳು ಕೆಳಮಟ್ಟ ದರ್ಜೆಯದಾಗಿವೆ. ಲೋಕೋಪಯೋಗಿ ಸಚಿವರಾದ ಉದಾಸಿಯವರು ಒಳ್ಳೆಯವರು ಉದಾರವಾಗಿದ್ದಾರೆ, ಆದರೆ ಪ್ರಯೋಜನವಿಲ್ಲ. ಈ ರಸ್ತೆಗಳಲ್ಲಿ ಖಂಡಿತವಾಗಿ ಯಾರೂ ಹೋಗುವುದಕ್ಕಾಗುವುದಿಲ್ಲ, ದಿನಾ ಅಲ್ಲಿ ಹೆಣ್ಣು ಮಕ್ಕಳು ಬೀಳುವುದು ಗರ್ಭಿಣಿ ಸ್ತ್ರೀಯರಿಗೆ ಪ್ರಸವ ವೇದನೆ ಅಲ್ಲೇ ಮಗುವಿನ ಹೆರಿಗೆಯಾಗುವುದು, ಇಂಥವನ್ನು ನಾವು ದಿನನಿತ್ಯ ನೋಡುತ್ತಿದ್ದೇವೆ, ಇದು ಏನಿದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗಾಗಲೇ 7 ಕೋಟಿ 5 ಲಕ್ಷ ರೂಪಾಯಿಗಳಲ್ಲಿ ಏನು ಅಭಿವೃದ್ಧಿ ಕಾಮಗಾರಿ ಕೆಲಸ ನಡೆಯುತ್ತಿದೆ ಎಂಬುದನ್ನು ಕೊಟ್ಟಿದ್ದೇವೆ. ಕಿ.ಮೀ. 5 ರಿಂದ 12 ರಲ್ಲಿ ಆಗಬೇಕಾಗಿದೆ, ಸ್ವಲ್ಪ ವೈಡನಿಂಗ್ ಆಗಬೇಕಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ಬೇಕಾದ ಅನುದಾನವನ್ನು ಲಭ್ಯತೆ ಮೇಲೆ ಬೇಗ ಮಾಡಿಸುವಂಥ ಕೆಲಸವನ್ನು ಮಾಡುತ್ತೇವೆ. ಮತ್ತು 510 ಲಕ್ಷ ರೂಪಾಯಿಗಳು ವಿವಿಧ ಯೋಜನೆಯಲ್ಲಿ ಅದಕ್ಕೆ ಒದಗಿಸಲಾಗಿದೆ. ಆ ಸಂಪೂರ್ಣ ರಸ್ತೆಯನ್ನು ಸುಧಾರಣೆ ಮಾಡುವಂಥ ಕೆಲಸವನ್ನು ಮಾಡುತ್ತೇವೆ. ಅಲ್ಲಿ ಹೆರಿಗೆಯಾಗುತ್ತಿದೆ ಎಂದು ಹೇಳುತ್ತಿರುವ ಮಾತು ಏಕೋ ಅನುಮಾನದಿಂದ ಹೇಳಿರಬೇಕೆಂದು ಹೇಳಬಯಸುತ್ತೇನೆ.

ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.: ಅನುಮಾನವಲ್ಲ ಸಹಜವಾಗಿ ಕಣ್ಣಿಂದ ನೋಡಿರತಕ್ಕಂಥದ್ದು, ಎಲ್ಲಾ ಕಡೆ ಹಾಗೆ ಆಗಿದೆ. ಉದಾಸಿಯವರು ಈ ಸರ್ಕಾರದಲ್ಲಿ

ಮಾಡುತ್ತಾರೋ ಇಲ್ಲವೋ ಮುಂದಿನ ಸರ್ಕಾರಕ್ಕೆ ಹೋಗುತ್ತದೆಯೋ ಗೊತ್ತಿಲ್ಲ. ಮಾಡಲಿ, ಕಾರ್ಯಪ್ರವೃತ್ತರಾಗಬೇಕು, ಸರ್ಕಾರದಲ್ಲಿರವವರು, ನಾನಾಗಲಿ ಅವರಾಗಲಿ ಎಲ್ಲರೂ ಕಾರ್ಯಪ್ರವೃತ್ತರಾಗಿ ಸಾಮಾಜಿಕ ಕಳಕಳಿಯನ್ನಿಟ್ಟುಕೊಂಡು ಮಾಡಬೇಕು.

ಬಿಜೆಪಿಯವರು ಮಕ್ಕಳಿಗೆ ಸೈಕಲ್ ಬೇರೆ ಕೊಟ್ಟಿದ್ದಾರೆ. ರಸ್ತೆಯಲ್ಲಿ ಓಡಾಡುವವರೆಲ್ಲಾ ಬಿದ್ದು ಹೋಗುತ್ತಿದ್ದಾರೆ. ದಯಮಾಡಿ ರಸ್ತೆಗಳನ್ನು ಈ ಅವಧಿಯಲ್ಲಿ ಮುಗಿಸುತ್ತೀರಾ? ಅಥವಾ ಇನ್ನೂ ಕೂಡ ಐದು ವರ್ಷ ಆಗಬೇಕೆಓ ಹೇಗೆ ಎಂದು ಕೇಳುತ್ತಿದ್ದೇನೆ.

ಶ್ರೀ ಎನ್. ಸತ್ಯನಾರಾಯಣ : ಮಾನ್ಯ ಅಧ್ಯಕ್ಷರೆ, ಇದೇ ರಸ್ತೆಗಳ ನಾನು ಕಳೆದ ಸಾರಿಯೂ ಪ್ರಸ್ತಾಪ ಮಾಡಿದ್ದೆ. ಹೋದ ಸಾರಿಯೂ ಇದೇ ಹಾರಿಕೆ ಉತ್ತರ ಕೊಟ್ಟಿರಿ. ದಯವಿಟ್ಟು ಈ ಸಾರಿ ಆದರೂ ಮೂರು ಕೋಟಿ ರೂಪಾಯಿ ಏನು ಕೊಡುತ್ತಿದ್ದೀರಿ ಅದನ್ನು ಮುಂದುವರೆಸಬೇಕು. ಹಾರಿಕೆ ಉತ್ತರ ಕೊಡುವುದು ಬೇಡ. ದಯವಿಟ್ಟು ಆ ರಸ್ತೆ ಆಗಲೇ ಬೇಕು.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ನನಗೆ ಸ್ಪಷ್ಟವಾದ ಉತ್ತರ ಬೇಕು. ಎಷ್ಟು ತಿಂಗಳಲ್ಲಿ ಹಾಗೂ ಎಷ್ಟು ವರ್ಷಗಳಲ್ಲಿ ಮುಗಿಸುತ್ತಾರೆಂದು ಹೇಳಲಿ.

ಶ್ರೀ ಸಿ.ಎಂ. ಉದಾಸಿ: ಇನ್ನೊಂದು ಮೂರು–ನಾಲ್ಕು ತಿಂಗಳುಗಳಲ್ಲಿ ಆ ಕೆಲಸ ಸಂಪೂರ್ಣವಾಗಿ ಮುಗಿಸುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಮೂರು–ನಾಲ್ಕು ತಿಂಗಳು ಎಂದರೆ ಅಷ್ಟು ಹೊತ್ತಿಗೆ ರಸ್ತೆಗಳು ಇನ್ನಷ್ಟು ಹಾಳಾಗಿ ಹೋಗಿರುತ್ತವೆ. ನಾವೆಲ್ಲಾ ನಗೆಪಾಟಿಲಿಗೆ ಈಡಾಗುತ್ತಿದ್ದೇವೆ. ಮಾಡುತ್ತಾರಾ?

ಅಧ್ಯಕ್ಷರು: ಮಾಡುತ್ತಾರೆಂದು ಹೇಳಿದ್ದಾರೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ನನಗೆ ಸ್ಪಷ್ಟವಾದ ಉತ್ತರ ಕೊಡಿ.

ಅಧ್ಯಕ್ಷರು: ನಾನು ಪ್ರಕಾಶ್ ಬಾಬಣ್ಣ ಹುಕ್ಕೇರಿಯವರಿಗೆ ಕರೆದಿದ್ದೇನೆ.

ಶ್ರೀ ಎಂ.ಟಿ. ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ದಯಮಾಡಿ ಅವರಿಗೆ ಸ್ವಲ್ಪ ಚುರುಕು ಮುಟ್ಟಿಸಿ, ಮಠಾಧೀಶರಿಗೆ ಕೊಡುವ ದುಡ್ಡನ್ನು ರಸ್ತೆಗೆ ಹಾಕುವುದಕ್ಕೆ ಹೇಳಿ. ಜನ accident ಆಗಿ ಸಾಯುತ್ತಿದ್ದಾರೆ.

ಶ್ರೀ ಯು.ಟಿ. ಖಾದರ್: ಮಾನ್ಯ ಮುಖ್ಯ ಮಂತ್ರಿಗಳು ಗುಂಡಿ ರಹಿತ ರಾಜ್ಯ ನಿರ್ಮಾಣ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ಮಠಗಳಿಗೆ ಕೊಡುವ ದುಡ್ಡನ್ನು ಕುಡಿಯುವ ನೀರಿಗೆ ಹಾಗೂ ರಸ್ತೆಗಳಿಗೆ ಕೊಡಿ. ಅಲ್ಲಿಯೇ ನಾವು ನೆಮ್ಮದಿ ಕಾಣಬಹುದು.

ಅಧ್ಯಕ್ಷರು: ಮಾನ್ಯ ಕುಮಾರಸ್ವಾಮಿಯವರೆ ಕುಳಿತುಕೊಳ್ಳಿ, ಇದು ಪ್ರಶ್ನೋತ್ತರ ದಯವಿಟ್ಟು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ. ಅವರು ಉತ್ತರ ಹೇಳಲಿ.

ಶ್ರೀ. ಸಿ.ಎಂ. ಉದಾಸಿ: ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದ್ದೇನೆ. ಮೂರು ತಿಂಗಳಲ್ಲಿ ಆ ರಸ್ತೆಯನ್ನು ದುರಸ್ತಿಗೊಳಿಸಿ ಕೊಡುತ್ತೇವೆಂದು ಹೇಳಿದ್ದೇನೆ. ಬೇರೆ ಬೇರೆ ಭಾಗಗಳಲ್ಲಿ ಸಹ ಗುಂಡಿ ಮುಚ್ಚುವ ಕೆಲಸ ಈಗಾಗಲೇ 90 ರಷ್ಟು ಮುಗಿದಿದೆ. ಇನ್ನೂ ಶೇಕಡ 10 ರಷ್ಟು ಬಾಕಿ ಇದೆ.

(ಗೊಂದಲ)

ಶ್ರೀ ಸಿ.ಎಂ. ಉದಾಸಿ: ಸ್ಪೆಸಿಫಿಕ್ ಆಗಿ ನೀವು ಹೇಳಿದರೆ ನಾನು ಮಾಡಿಕೊಡುತ್ತೇನೇ.

ಶ್ರೀ ಎಸ್. ಸುರೇಶ್ ಕುಮಾರ್: ಯಾವುದಾದರೂ ಸ್ಪೆಸಿಫಕ್ ಆಗಿದ್ದರೆ, ಮಾನ್ಯ ಸಚಿವರಿಗೆ ಹೇಳಲಿ ಅವರು ಮಾಡಿ ಕೊಡುತ್ತಾರೆ.

ಅಧ್ಯಕ್ಷರು: ಎಲ್ಲರೂ ಹೀಗೆ ಎದ್ದು ನಿಂತು ಕೇಳಿದರೆ ಅವರು ಏನು ಉತ್ತರ ಹೇಳುವುದಕ್ಕಾಗುತ್ತದೆ? ನಾನು ಪ್ರಶ್ನೆಯನ್ನು ಡ್ರಾಪ್ ಮಾಡಬೇಕಾಗುತ್ತದೆ ಅಷ್ಟೆ.

ಶ್ರೀ ಸಿ.ಎಂ. ಉದಾಸಿ: ಸ್ಪೆಸಿಫಿಕ್ ಅಗಿ ಪ್ರಶ್ನೆಗಳನ್ನು ಕಳುಹಿಸಿದರೆ ಅದಕ್ಕೆ ಉತ್ತರ ಒದಗಿಸುತ್ತೇನೆ.

ಅಧ್ಯಕ್ಷರು: ಅವರು ಹೇಳಿದರು ತಾವು ಕುಳಿತುಕೊಳ್ಳಿ, ನೀವು ಸ್ಪೆಸಿಫಿಕ್ ಆಗಿ ಕೇಳಿ. ಅವರ ಜೊತೆ ಮಾತನಾಡಿ.

ರಸ್ತೆ ಅಭಿವೃದ್ಧಿ

50 (601) **ಪ್ರಕಾಶ್ ಬಾಬಣ್ಣ ಹುಕ್ಕೇರಿ (ಚಿಕ್ಕೋಡಿ ಸದಲಗ):** ಈ ಕೆಳಗಿನ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:–

(ಅ) ಮುಧೋಳ–ಮಹಾಲಿಂಗಪೂರ–ಕಬ್ಬೂರ್–ಚಿಕ್ಕೋಡಿ–ನಿಪ್ಪಾಣಿ (108 ಕಿ.ಮೀ.) ರಾಜ್ಯ ಪ್ರಮುಖ ಹೆದ್ದಾರಿ ಸುಧಾರಣಾ ಕಾಮಗಾರಿಯನ್ನು ಕರ್ನಾಟಕ ರಾಜ್ಯ